# ಹಣ, ಸೀರೆ ಹಂಚಿಕೆ ಒಳ್ಳೆಯದಲ್ಲ: ಹೊರಟ್ಟಿ

**ಕಾರವಾರ:** ಪ್ರಜಾಪ್ರಭುತ್ವದಲ್ಲಿ ಹಣ, ಸೀರೆ ಹಾಗೂ ಕುಕ್ಕರ್ ಹಂಚುವ ಪದ್ಧತಿ ಮುಂದುವರಿದರೆ ರಾಜಕಾರಣದಲ್ಲಿ ಒಳ್ಳೆಯವರು ಬರಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ''ಈ ರೀತಿ ದುಡ್ಡಿನಿಂದ ಆಟವಾಡಿದರೆ ನ್ಯಾಯ, ನೀತಿ ಎಲ್ಲಿ ಹೋಗಬೇಕು? ಮತದಾರರು ಕ್ಷೇತ್ರದಲ್ಲಿ ಯಾರು ಯೋಗ್ಯರಿದ್ದಾರೆ, ಮತದಾರರ ಕಾಳಜಿ ಯಾರು ಮಾಡುತ್ತಾರೆ ಅಂತಹವರಿಗೆ ಮತ ಹಾಕಬೇಕು,'' ಎಂದು ಕಿವಿಮಾತು ಹೇಳಿದರು.